# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1324** |
| ಸದಸ್ಯರ ಹೆಸರು | : | **ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)** |
| ಉತ್ತರಿಸಬೇಕಾದ ಸಚಿವರು | : | ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 19-03-2025 |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಹಸಿರು ತೆರಿಗೆ (ಗ್ರೀನ್ ಟ್ಯಾಕ್ಸ್) ಎಂದರೇನು; ಯಾವ ಯಾವ ವಾಹನಗಳಿಗೆ ಹಸಿರು ತೆರಿಗೆ ವಿಧಿಸಲಾಗುತ್ತದೆ: ವಿಧಿಸಲಾಗುವ ಶೇಕಡವಾರು ತೆರಿಗೆ ಪ್ರಮಾಣ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಹಸಿರು ತೆರಿಗೆ ಎಂದರೆ "ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ(3)(ಬಿ) ರಲ್ಲಿ ಇರುವಂತೆ ಹಳೆಯ ಮತ್ತು ವಾಯು ಮಾಲಿನ್ಯವನ್ನು ಉಂಟು ಮಾಡುವ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ವಾಹನಗಳಿಂದ ಆಕರಿಸುವ ತೆರಿಗೆಯ ಮೊತ್ತವಾಗಿರುತ್ತದೆ." ಸದರಿ ಹಸಿರು ತೆರಿಗೆಯನ್ನು ವಾಯು ಮಾಲಿನ್ಯದಿಂದ ಉಂಟಾಗುವ / ಉದ್ಭವಿಸುವ ಪರಿಸ್ಥಿತಿಗಳನ್ನು ನಿಭಾಯಿಸಲು ಮುನ್ನೆಚ್ಚರಿಕೆ ಕ್ರಮಗಳಿಗಾಗಿ ಬಳಸಲಾಗುತ್ತದೆ.
<table>
<tr><th>Sl. No.</th><th>Class and Age of the Vehicle</th><th>Rate of cess in rupees</th></tr>
<tr><td>1.</td><td>Non-transport vehicle completed 15 years from the date of its registration, at the time of renewal of certificate of registration as per sub-section (10) of Section 41 of the Motor Vehicles Act, 1988:-<br>a. Two wheelers<br>b. Other than two wheelers</td><td><br>250-00<br>500-00</td></tr>
<tr><td>2.</td><td>Transport vehicle completed 7 years from the date of its registration, at the time of renewal of fitness certificate as per Section 56 of the Motor Vehicles Act, 1988</td><td>200-00 per annum</td></tr>
</table>
</td></tr>
</table>

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>ಕಳೆದ 5 ವರ್ಷಗಳಲ್ಲಿ ಸಂಗ್ರಹಿಸಲ್ಪಟ್ಟಂತಹ ಹಸಿರು ತೆರಿಗೆ ಎಷ್ಟು; ವಾಯುಮಾಲಿನ್ಯ ನಿಯಂತ್ರಣಕ್ಕಾಗಿ ಭರಿಸಲಾದ ವೆಚ್ಚ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)</td><td>ಕಳೆದ 5 ವರ್ಷಗಳಲ್ಲಿ ಸಂಗ್ರಹಿಸಲ್ಪಟ್ಟಂತಹ ಹಸಿರು ತೆರಿಗೆ ಕೆಳಕಂಡಂತಿದೆ ಮತ್ತು ವಾಯುಮಾಲಿನ್ಯ ನಿಯಂತ್ರಣಕ್ಕಾಗಿ ಭರಿಸಲಾದ ವೆಚ್ಚದ ವಿವರ ಕೆಳಕಂಡಂತಿದೆ.
<table>
<tr><th>ವರ್ಷವಾರು</th><th>ಹಸಿರು ತೆರಿಗೆ ಸಂಗ್ರಹ (ರೂ. ಲಕ್ಷಗಳಲ್ಲಿ)</th><th>ವಾಯುಮಾಲಿನ್ಯ ನಿಯಂತ್ರಣಕ್ಕಾಗಿ ಭರಿಸಲಾದ ವೆಚ್ಚ (ರೂ. ಲಕ್ಷಗಳಲ್ಲಿ)</th></tr>
<tr><td>2019-20</td><td>9762.49</td><td>13.8</td></tr>
<tr><td>2020-21</td><td>8764.59</td><td>17.6</td></tr>
<tr><td>2021-22</td><td>9131.26</td><td>895.1</td></tr>
<tr><td>2022-23</td><td>7008.69</td><td>2282.1</td></tr>
<tr><td>2023-24</td><td>7445.7</td><td>1957.0</td></tr>
</table></td></tr>
<tr><td>ಇ)</td><td>ಇದೇ ಅವಧಿಯಲ್ಲಿ ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳ ಅಡಿಯಲ್ಲಿ ತೆರೆಯಲಾದ ಹಸಿರು ತೆರಿಗೆ ಉಪಕರ ನಿಧಿಗೆ ವರ್ಗಾಯಿಸಲ್ಪಟ್ಟ ಸ್ವೀಕೃತಿಗಳು ಮತ್ತು ವೆಚ್ಚ ಎಷ್ಟು; ವರ್ಗಾಯಿಸದಿದ್ದರೆ ಕಾರಣಗಳೇನು; ಹಾಗೂ ಯಾವ ವರ್ಷ ವರ್ಗಾಯಿಸಲಾಗಿದೆ; (ವಿವರ ನೀಡುವುದು)</td><td>ಸಾರಿಗೆ ಇಲಾಖೆಯಲ್ಲಿ ಹಸಿರು ತೆರಿಗೆ ಉಪಕರ ನಿಧಿಗಾಗಿ ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಯನ್ನು ತೆರೆಯಲಾಗಿರುವುದಿಲ್ಲ.</td></tr>
<tr><td>ಈ)</td><td>ವಿವಿಧ ವರ್ಗದ ಮೋಟಾರು ವಾಹನಗಳಿಗೆ ವಿಧಿಸಲಾಗುವ ರಸ್ತೆ ಸುರಕ್ಷತೆ ಉಪಕರ ಎಷ್ಟು;</td><td>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಾರಿಇ 50 ಸಾಇಪ 2018 ದಿನಾಂಕ:06-03-2019 ರಂತೆ ದ್ವಿಚಕ್ರ ವಾಹನ / ತ್ರಿಚಕ್ರ ವಾಹನಗಳಿಗೆ (ಸರಕು / ಪ್ರಯಾಣಿಕರ ವಾಹನ) ರೂ.500/- ಗಳನ್ನು ಹಾಗೂ ಎಲ್ಲಾ ಇತರೆ ವರ್ಗದ ವಾಹನಗಳಿಗೆ (ಸಾರಿಗೆ/ಸಾರಿಗೇತರ ವಾಹನ) ರೂ.1,000/- ಗಳಂತೆ ರಸ್ತೆ ಸುರಕ್ಷತಾ ಕರವನ್ನು ವಿಧಿಸಲಾಗುತ್ತಿದೆ.</td></tr>
</table>

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಉ)</td><td>ಕಳೆದ 5 ವರ್ಷಗಳಲ್ಲಿ ಸಂಗ್ರಹಿಸಲ್ಪಟ್ಟ ರಸ್ತೆ ಸುರಕ್ಷತೆ ಉಪಕರ ಎಷ್ಟು; ಈ ಉಪಕರವನ್ನು ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಲೆಕ್ಕ ಶೀರ್ಷಿಕೆ: 0041-00-102-0-12 ರಡಿಯಲ್ಲಿ ರಸ್ತೆ ಸುರಕ್ಷತಾ ಉಪಕರವನ್ನು ಈ ಕೆಳಗಿನಂತೆ ಸಂಗ್ರಹಿಸಲಾಗಿದೆ.
<table>
<tr><th>ವರ್ಷ</th><th>ಸಂಗ್ರಹಿಸಲಾದ ಉಪಕರ (ರೂ.ಲಕ್ಷಗಳಲ್ಲಿ)</th></tr>
<tr><td>2019-2020</td><td>9762.49</td></tr>
<tr><td>2020-2021</td><td>8764.58</td></tr>
<tr><td>2021-2022</td><td>9131.25</td></tr>
<tr><td>2022-2023</td><td>7008.69</td></tr>
<tr><td>2023-2024</td><td>7445.74</td></tr>
</table>
ಮೇಲಿನ ಕೋಷ್ಟಕದನ್ವಯ ಸಂಗ್ರಹಿಸಲಾದ ರಸ್ತೆ ಸುರಕ್ಷತಾ ಉಪಕರವನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಎಲ್ಲಾ ಪಾಲುದಾರಿಕೆ ಇಲಾಖೆಗಳಾದ ಪೊಲೀಸ್, ಸಾರಿಗೆ, ಲೋಕೋಪಯೋಗಿ ಮತ್ತು ಆರೋಗ್ಯ ಇಲಾಖೆಗೆ ರಸ್ತೆ ಸುರಕ್ಷತಾ ಮತ್ತು ಸುಧಾರಣಾ ಕಾರ್ಯಕ್ರಮ ಹಮ್ಮಿಕೊಳ್ಳಲು ಅನುದಾನ ಬಳಸಿಕೊಳ್ಳಲಾಗಿದೆ.</td></tr>
</table>

**ಟಿಡಿ 27 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.